# ಕರ್ನಾಟಕ ಲೋಕಾಯುಕ್ತ

**ಕಂಪ್ಲೆಂಟ್/ಲೋಕ್/ಎಂ.ವೈ.ಎಸ್./3522/2021**
**ಪಿ.ಓ.ಎ.ಆರ್.ಇ-06 (ಮಂಡನಾಧಿಕಾರಿಗಳ ಶಾಖೆ).**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ:06/01/2023.

11/1/23

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ:** **ಶ್ರೀ. ಆರ್. ಗೋಪಾಲ್,** ನಿರ್ದೇಶಕರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ವಸ್ತು ಪ್ರದರ್ಶನ ಮೈದಾನ, ಮೈಸೂರುರವರು ಕರ್ತವ್ಯಲೋಪವೆಸಗಿರುವ ಬಗ್ಗೆ.

****

**ಶ್ರೀ. ಕೆ. ಪರಶುರಾಮ, ಪೊಲೀಸ್ ಉಪಾಧೀಕ್ಷಕರು ಕರ್ನಾಟಕ ಲೋಕಾಯುಕ್ತ ಮೈಸೂರು** (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರಿಗೆ ಬಂದ ಮಾಹಿತಿಯ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಗೌಪ್ಯ ವರದಿಯನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಮೈಸೂರುರವರಿಗೆ **ಶ್ರೀ. ಆರ್. ಗೋಪಾಲ್, ನಿರ್ದೇಶಕರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ವಸ್ತು ಪ್ರದರ್ಶನ ಮೈದಾನ, ಮೈಸೂರು** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ನು ಪರಿಶೀಲಿಸಿ, ಮಾನ್ಯ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರುರವರ ಆದೇಶದ ಮೇರೆಗೆ ಎದುರುದಾರರ ವಿರುದ್ಧ ಕಲಂ 13(1)(ಇ) ಜೊತೆಗೆ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಸ್ವಯಂ ದೂರನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಎದುರುದಾರರು ಪರಿಶೀಲನಾ ಅವಧಿಯಾದ ದಿ: 30/11/1990 ರಿಂದ 18/12/2012ರವರೆಗೆ ಅವರ ಬಲ್ಲ ಮೂಲಗಳ ಆದಾಯಕ್ಕಿಂತ ಶೇಕಡ 53.754 ರಷ್ಟು ಹೆಚ್ಚಿನ ಆಸ್ತಿಯನ್ನು ಹೊಂದಿರತ್ತಾರೆಂದು ಮತ್ತು ಅವರು ಖರೀದಿಸಿದ ಸ್ಥಿರ ಹಾಗೂ ಚರಾಸ್ತಿಗಳ ಬಗ್ಗೆ, ಸಾಲ ಪಡೆದ ಬಗ್ಗೆ ಮತ್ತು ಮಾರಾಟ ಮಾಡಿದ ಬಗ್ಗೆ ಅವರ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಹಾಗೂ ಮಾಹಿತಿ ಸಲ್ಲಿಸದೆ, ಕ.ನಾ.ಸೇ. (ನಡತೆ) ನಿಯಮ 1966ರ ನಿಯಮಗಳನ್ನು ಪಾಲಿಸದೆ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(1)(ಬಿ)ರ ಅನ್ವಯ

ಗೌರವಾನ್ವಿತ ಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) ದೂರುದಾರರಾದ **ಶ್ರೀ. ಕೆ. ಪರಶುರಾಮ, ಪೊಲೀಸ್ ಉಪಾಧೀಕ್ಷಕರು ಕರ್ನಾಟಕ ಲೋಕಾಯುಕ್ತ ಮೈಸೂರು** ಇವರಿಗೆ ಬಂದ ಮಾಹಿತಿ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಗೌಪ್ಯ ವರದಿಯನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಮೈಸೂರುರವರಿಗೆ ಸಲ್ಲಿಸಿದ್ದು, ಅವರು ಅದನ್ನು ಪರಿಶೀಲಿಸಿ, ಮಾನ್ಯ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಮೈಸೂರುರವರು, ಅವರ ಕಚೇರಿಯ ಆದೇಶ ಸಂ: ಕೆ.ಎಲ್.ಎ/ ಎಂ.ವೈ.ಎಸ್/ ಪಿ.ಡ.ಬ್ಲ್ಯೂ/ ಎಸ್.ಪಿ/ ಆಥರೈಸೇಷನ್/04/2012, ದಿ:18/12/2012ರ ಆದೇಶದಂತೆ ಕಲಂ 13(1)(ಇ) ಜೊತೆಗೆ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಎದುರುದಾರರ ವಿರುದ್ಧ ಸ್ವಯಂ ಪ್ರಕರಣ ದಾಖಲಿಸಿಕೊಳ್ಳಲು ದೂರುದಾರರಿಗೆ ಆದೇಶಿಸಿದ್ದು, ಅದರಂತೆ ಅವರ ಠಾಣೆಯ ಗುನ್ನೆ ನಂ.23/2012ರಲ್ಲಿ ಎದುರುದಾರರ ವಿರುದ್ಧ ಕಲಂ 13(1)(ಇ) ಸಹಿತ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii. ಎದುರುದಾರರು ಅವರ ಪರಿಶೀಲನಾ ಅವಧಿಯಾದ 30/11/1990 ರಿಂದ 18/12/2012 ರವರೆಗೆ ಅವರು ಖರೀದಿಸಿದ ಸ್ಥಿರ ಮತ್ತು ಚರಾಸ್ತಿಗಳ ಬಗ್ಗೆ ಸಾಲ ಪಡೆದ ಬಗ್ಗೆ ಹಾಗೂ ಮಾರಾಟ ಮಾಡಿದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಹಾಗೂ ಮಾಹಿತಿ ಸಲ್ಲಿಸದೆ, ಕ.ನಾ.ಸೇ. (ನಡತೆ) 1966ರ ನಿಯಮಗಳನ್ನು ಪಾಲಿಸದೆ, ಕರ್ತವ್ಯಲೋಪವೆಸಗಿರುತ್ತಾರೆಂದು ತಿಳಿಸಿರುತ್ತಾರೆ.

ii(a). ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಗಳಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:-

ಕಂಪ್ಲೆಂಟ್/ಲೋಕ್/ಎಂ.ವೈ.ಎಸ್./3522/2021
ಪಿ.ಓ.ಎ.ಆರ್.ಇ-06

| ಕ್ರ. ಸಂ. | ಆಸ್ತಿಯ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ. | ಅಂದಾಜು ಮೌಲ್ಯ ರೂ.ಗಳಲ್ಲಿ | ಷರಾ |
|---|---|---|---|---|
| 1 | 40 X 60 ಅಳತೆಯ ನಿವೇಶನ ಸಂ.4235, 3ನೇ ಹಂತ, ಚಾಮರಾಜ ಮೊಹಲ್ಲಾ, ದಟ್ಟಗಳ್ಳಿ ಬಡಾವಣೆ, ಮೈಸೂರು, ಮೈಸೂರು ಮುಡಾದಿಂದ ದಿ: 31/07/1998 ರಂದು ಮಂಜೂರು ಮೂಲಕ ಖರೀದಿಸಿರುತ್ತಾರೆ. | ಎದುರುದಾರರ ಹೆಸರಿನಲ್ಲಿ | 1,00,000/- | ಎದುರುದಾರರು ಅವರ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ನಿವೇಶನವನ್ನು ಖರೀದಿಸಿರುತ್ತಾರೆ. |
| 2 | ಮೈಸೂರಿನ ಮನೆ ನಂ.323, 10ನೇ ಮೇನ್, ಸನ್ಮಾರ್ಗ, ಸಿದ್ದಾರ್ಥ ಲೇಔಟ್‌ನಲ್ಲಿರುವ ಮನೆಯ ಮೇಲೆ ಮೊದಲನೇ ಮತ್ತು ಎರಡನೇ ಮಹಡಿಯ ಮನೆಯನ್ನು ಕಟ್ಟಿರುತ್ತಾರೆ. | ಎದುರುದಾರರ ಹೆಸರಿನಲ್ಲಿ | 45,00,000/- ಕ್ಕೂ ಹೆಚ್ಚು. (ಕಟ್ಟಡದ ವೆಚ್ಚ) | ಎದುರುದಾರರು ಆಸ್ತಿಯನ್ನು ಕೊಂಡುಕೊಂಡ ನಂತರ, ತಳಮಹಡಿಯಲ್ಲಿ 173.00 ಚ.ಅ. ವಿಸ್ತೀರ್ಣದ ಹೆಚ್ಚುವರಿ ಕಟ್ಟಡವನ್ನು ನಿರ್ಮಾಣ ಮಾಡಿರುವುದಲ್ಲದೆ, ಹಲವಾರು ಮಾರ್ಪಾಡು ಮತ್ತು ನವೀಕರಣವನ್ನು ಮಾಡಿರುತ್ತಾರೆ. ಆ ಬಗ್ಗೆ ನಿಯಮಿಸಲಾದ ಪ್ರಾಧಿಕಾರ ದಿಂದ ಪೂರ್ವಾನುಮತಿ ಪಡೆದಿರುವುದಿಲ್ಲ. ಮೊದಲನೇ ಮಹಡಿಯಲ್ಲಿ 2000 ಚ.ಅ. ವಿಸ್ತೀರ್ಣದ ಕಟ್ಟಡದ ಬಗ್ಗೆ ನಕ್ಷೆ ಮಂಜೂರು ಮಾಡಿಸಿಕೊಂಡಿದ್ದು, 246 ಚ.ಅ. ಹೆಚ್ಚುವರಿ ಕಟ್ಟಡ ನಿರ್ಮಾಣ ಮಾಡಿರುತ್ತಾರೆ ಮತ್ತು ಎರಡನೇ ಮಹಡಿಯಲ್ಲಿ 370.28 ಚ.ಅ. ವಿಸ್ತೀರ್ಣದ ಕಟ್ಟಡ ಕಟ್ಟಿರುತ್ತಾರೆ. ಎದುರುದಾರರು ಸಕ್ಷಮ ಪ್ರಾಧಿಕಾರದಿಂದ 10,40,000/- ರೂ. ಕಟ್ಟಡ ನಿರ್ಮಾಣದ ಬಗ್ಗೆ ಅನುಮತಿ ಪಡೆದಿದ್ದು, ಹೆಚ್ಚುವರಿಯಾಗಿ |

| | | | | |
|---|---|---|---|---|
| | | | | 35,24,245/- ರೂ.ಗಳನ್ನು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೇ ಖರ್ಚು ಮಾಡಿರುವುದು ಕಂಡುಬರುತ್ತದೆ. |
| 3 | ಬೆಂಗಳೂರು, ಬನಶಂಕರಿ 6ನೇ ಹಂತ, 4ನೇ ಬ್ಲಾಕ್‌ನಲ್ಲಿರುವ ನಿವೇಶನ ಸಂ.407ನ್ನು ಶ್ರೀ. ಪಿ.ವೆಂಕಟೇಶ್‌ರವರು ದಾನವಾಗಿ ನೀಡಿರುತ್ತಾರೆ. | ಎದುರುದಾರರ ಪತ್ನಿಯ ಹೆಸರಿನಲ್ಲಿ | -------- | ಎದುರುದಾರರು ಅವರ ಸಕ್ಷಮ ಪ್ರಾಧಿಕಾರದಿಂದ ಅವರ ಪತ್ನಿ ದಾನ ಪಡೆಯುವ ಪೂರ್ವದಲ್ಲಿ ಅನುಮತಿಯನ್ನು ಪಡೆದಿರುವುದಿಲ್ಲ ಮತ್ತು ನಂತರ ಮಾಹಿತಿ ಸಲ್ಲಿಸಿರುವುದಿಲ್ಲ. |
| 4 | ಬೆಂಗಳೂರು ಬಸವೇಶ್ವರ ನಗರದ ಎಸ್.ಬಿ.ಐ. ಆಫೀಸರ್ಸ್ ಕಾಲೋನಿ, ಬಿಬಿಎಂಪಿ ಹಳೇ ವಾರ್ಡ್ ನಂ.18, ಹೊಸ ನಂ.101, ಮನೆ ಸಂ.64, 60 X 39 ಅಡಿ ಅಳತೆಯ ಮನೆಯನ್ನು ಶ್ರೀ. ಕೆ. ರಾಮಮೂರ್ತಿ ರವರಿಂದ ದಿ: 15/11/2010 ರಂದು ಖರೀದಿಸಿರುತ್ತಾರೆ. | ಎದುರುದಾರರ ಪತ್ನಿಯ ಹೆಸರಿನಲ್ಲಿ | 50,00,000/- | ಎದುರುದಾರರು ಅವರ ಸಕ್ಷಮ ಪ್ರಾಧಿಕಾರದಿಂದ ಅವರ ಪತ್ನಿ ಮನೆಯನ್ನು ಖರೀದಿಸುವ ಪೂರ್ವದಲ್ಲಿ ಅನುಮತಿಯನ್ನು ಪಡೆದಿರುವುದಿಲ್ಲ ಮತ್ತು ಮಾಹಿತಿ ಸಲ್ಲಿಸಿರುವುದಿಲ್ಲ ಹಾಗೂ ಸದರಿ ಆಸ್ತಿಯನ್ನು ಭೋಗ್ಯಕ್ಕೆ ನೀಡುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದಿಲ್ಲ.<br><br>ಸದರಿ ತಳಮಹಡಿ ಮನೆಯನ್ನು ಶ್ರೀ. ಅಶೋಕ್ ಸೇಠಿಯಾ ರವರಿಗೆ ರೂ. 12,50,000/-ಕ್ಕೆ ಭೋಗ್ಯಕ್ಕೆ ನೀಡಿರುತ್ತಾರೆ.<br><br>ಸದರಿ ಮನೆಯ ಮೊದಲನೇ ಮಹಡಿಯನ್ನು ಶ್ರೀ. ಕೆ. ರಾಮಮೂರ್ತಿ ಇವರಿಗೆ |

| | | | | |
|---|---|---|---|---|
| | | | | 12,00,000/– ರೂ.ಗಳಿಗೆ ಭೋಗ್ಯಕ್ಕೆ ನೀಡಿರುತ್ತಾರೆ. |

ಈ ಮೇಲ್ಕಂಡ ಪ್ರಕರಣದ ಎಲ್ಲಾ ಸ್ಥಿರಾಸ್ತಿಗಳನ್ನು ಎದುರುದಾರರು ಅವರ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಖರೀದಿಸುವ / ದಾನಪತ್ರ ಮಾಡಿಸಿಕೊಳ್ಳುವ ಮತ್ತು ಕಟ್ಟಡ ಕಟ್ಟುವ ಪೂರ್ವದಲ್ಲಿ ಹಾಗೂ ಭೋಗ್ಯಕ್ಕೆ ನೀಡುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದಿಲ್ಲ. ಆ ಕಾರಣ, ಎದುರುದಾರರು ನಿಯಮ 23(2) ಕ.ನಾ.ಸೇ. (ನಡತೆ) ನಿಯಮಗಳು, 1966 (ಪ್ರಸ್ತುತ ನಿಯಮ 24(3) ಕ.ನಾ.ಸೇ. (ನಡತೆ) ನಿಯಮಗಳು, 2021)ನ್ನು ಉಲ್ಲಂಘಿಸಿ, ಕ.ನಾ.ಸೇ. (ನಡತೆ) ನಿಯಮಗಳು, 1966ರ ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ii(b) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಈ ಕೆಳಕಂಡ ವಾಹನಗಳನ್ನು ಖರೀದಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:–

| ಕ್ರ. ಸಂ. | ವಾಹನದ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ. | ಅಂದಾಜು ಮೌಲ್ಯ ರೂ.ಗಳಲ್ಲಿ |
|---|---|---|---|
| 1 | ಮ್ಯಾಟೀಜ್ ಕಾರಿನ ಸಂ.ಕೆಎ–02–ಪಿ–3274, ದಿ: 13/10/2000ರಂದು ಮಣಿಪಾಲ್ ಮೋಟಾರ್ಸ್ ಪ್ರೈವೇಟ್ ಲಿಮಿಟೆಡ್, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು ಇವರಿಂದ ಖರೀದಿಸಿರುತ್ತಾರೆ. | ಎದುರುದಾರರ ಹೆಸರಿನಲ್ಲಿ. | 3,03,269/– |
| 2 | ಹ್ಯುಂಡೈ ವರ್ಣ ಡೆಮೋ ಕಾರಿನ ಸಂ.ಕೆಎ–09–ಜೆಡ್–5256ನ್ನು ಅದ್ವೈತ ಮೋಟಾರ್ಸ್ ಪ್ರೈವೇಟ್ ಲಿಮಿಟೆಡ್, ಮೈಸೂರುರವರಿಂದ ಖರೀದಿಸಿರುತ್ತಾರೆ. | ಎದುರುದಾರರ ಹೆಸರಿನಲ್ಲಿ. | 8,25,000/– |

ಈ ಮೇಲ್ಕಂಡ ವಾಹನಗಳನ್ನು ಎದುರುದಾರರು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದಿಲ್ಲ. ಆ ಕಾರಣ, ಎದುರುದಾರರು ನಿಯಮ 23(3) ಕ.ನಾ.ಸೇ. (ನಡತೆ) ನಿಯಮಗಳು, 1966 (ಪ್ರಸ್ತುತ ನಿಯಮ 24(4) ಕ.ನಾ.ಸೇ. (ನಡತೆ) ನಿಯಮಗಳು, 2021)ನ್ನು ಉಲ್ಲಂಘಿಸಿ, ಕ.ನಾ.ಸೇ. (ನಡತೆ) ನಿಯಮಗಳು, 1966ರ ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ii(c) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರ ಪತ್ನಿಯ ಹೆಸರಿನಲ್ಲಿ ಹಣ ಹೂಡಿಕೆ ಮಾಡಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:-

| ಕ್ರ. ಸಂ. | ಹೂಡಿಕೆ ವಿವರ | ಯಾರ ಹೆಸರಿನಲ್ಲಿ ಹಣ ಹೂಡಿಕೆ ಮಾಡಲಾಗಿದೆ. | ಹೂಡಿಕೆ ಮೊತ್ತ ರೂ.ಗಳಲ್ಲಿ | ಷರಾ |
|---|---|---|---|---|
| 1 | ಸೃಷ್ಟಿ ಡೆಂಟಲ್ ಕ್ಲಿನಿಕ್ | ಎದುರುದಾರರ ಪತ್ನಿಯ ಹೆಸರಿನಲ್ಲಿ | 7,73,249/- | ಎದುರುದಾರರ ಪತ್ನಿ 2008-09ನೇ ಸಾಲಿನಲ್ಲಿ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಸೃಷ್ಟಿ ಡೆಂಟಲ್ ಕ್ಲಿನಿಕ್‌ನಲ್ಲಿ ತೊಡಗಿಸಿರುವ ಮೂಲಧನ 7,73,249/- ಎಂದು ತೋರಿಸಿರುತ್ತಾರೆ. ಮತ್ತು ಎದುರುದಾರರ ಪತ್ನಿಯ ತಂದೆ ಶ್ರೀ. ಪಿ. ವೆಂಕಟೇಶ್, 4,69,979/- ರೂ.ಗಳನ್ನು ಕೊಡುಗೆಯಾಗಿ ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಆ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. |

ಎದುರುದಾರರು ಮೇಲ್ಕಂಡ ಮಾಹಿತಿಯನ್ನು ಅವರ ಸಕ್ಷಮ ಪ್ರಾಧಿಕಾರದವರಿಗೆ ಸಲ್ಲಿಸದೆ, ನಿಯಮ 23(3) ಹಾಗೂ 23(3-ಎ) ಕ.ನಾ.ಸೇ. (ನಡತೆ) ನಿಯಮಗಳು, 1966 (ಪ್ರಸ್ತುತ ನಿಯಮ 24(5) ಕ.ನಾ.ಸೇ. (ನಡತೆ) ನಿಯಮಗಳು, 2021)ನ್ನು ಉಲ್ಲಂಘಿಸಿ, ಕ.ನಾ.ಸೇ. (ನಡತೆ) ನಿಯಮಗಳು, 1966ರ ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು

2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ii(d) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಈ ಕೆಳಕಂಡ ಸ್ಥಿರ ಮತ್ತು ಚರಾಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:-

| ಕ್ರ. ಸಂ. | ಆಸ್ತಿಗಳ ವಿವರ | ಯಾರ ಹೆಸರಿನಲ್ಲಿ ಮಾರಾಟ ಮಾಡಲಾಗಿದೆ. | ಆದಾಯದ ಮೊತ್ತ ರೂ.ಗಳಲ್ಲಿ |
|---|---|---|---|
| 1 | ಮೈಸೂರು, ಚಾಮರಾಜಮೊಹಲ್ಲಾ ದಟ್ಟಗಳ್ಳಿಯಲ್ಲಿರುವ ನಿವೇಶನ ಸಂ.4235 ವಿಸ್ತೀರ್ಣ 40 X 60 ಅಡಿ ನಿವೇಶನವನ್ನು ದಿ: 20/04/2006 ರಂದು ಮಾರಾಟ ಮಾಡಲಾಗಿದೆ. | ಎದುರುದಾರರು ಶ್ರೀಮತಿ. ರುಕ್ಮಿಣಿ ವೇದಾಂತಚಾರ್‌ರವರಿಗೆ ಮಾರಾಟ ಮಾಡಿರುತ್ತಾರೆ. | 18,00,000/- |
| 2 | ಮ್ಯಾಟೀಜ್ ಕಾರಿನ ಸಂ.ಕೆಎ-02-ಪಿ-3274, ನವೆಂಬರ್ 2012 ರಂದು ಮಾರಾಟ ಮಾಡಿರುತ್ತಾರೆ. | ಎದುರುದಾರರು, ಅವರ ಪತ್ನಿಯ ತಂಗಿಯ ಗಂಡ ಡಾ: ಲಕ್ಷ್ಮೀಕಾಂತ್ ರವರಿಗೆ ಮಾರಾಟ ಮಾಡಿರುತ್ತಾರೆ. | 75,000/- |

ಎದುರುದಾರರು ಮೇಲ್ಕಂಡ ಆಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದವರಿಂದ ಅನುಮತಿ ಪಡೆಯದೆ ಹಾಗೂ ಮಾಹಿತಿ ಸಲ್ಲಿಸದೆ ನಿಯಮ 23(2) ಹಾಗೂ 23(3-ಎ) ಕ.ನಾ.ಸೇ. (ನಡತೆ) ನಿಯಮಗಳು, 1966 (ಪ್ರಸ್ತುತ ನಿಯಮ 24(5) ಕ.ನಾ.ಸೇ. (ನಡತೆ) ನಿಯಮಗಳು, 2021)ನ್ನು ಉಲ್ಲಂಘಿಸಿ, ಕ.ನಾ.ಸೇ. (ನಡತೆ) ನಿಯಮಗಳು, 1966ರ ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ii(e) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಈ ಕೆಳಕಂಡ ಬ್ಯಾಂಕ್‌ಗಳಲ್ಲಿ ಸಾಲ ಮತ್ತು ಕೈಸಾಲ ಮಾಡಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:–

| ಕ್ರ. ಸಂ. | ಬ್ಯಾಂಕಿನ ವಿವರ | ಯಾರ ಹೆಸರಿನಲ್ಲಿ ಸಾಲ ಪಡೆಯಲಾಗಿದೆ. | ಸಾಲದ ಮೊತ್ತ ರೂ.ಗಳಲ್ಲಿ |
|---|---|---|---|
| 1 | ಎಸ್.ಬಿ.ಐ. ಸಯ್ಯಾಜಿರಾವ್ ರಸ್ತೆ, ಮೈಸೂರು ಶಾಖೆ, ಮನೆಸಾಲ | ಎದುರುದಾರರ ಹೆಸರಿನಲ್ಲಿ | 15,00,000/– |
| 2 | ಎಸ್.ಬಿ.ಐ. ಕಾರ್ಪೋರೇಷನ್ ಶಾಖೆ, ಮೈಸೂರು, ಗೃಹಸಾಲ | ಎದುರುದಾರರ ಹೆಸರಿನಲ್ಲಿ | 4,50,000/– |
| 3 | ಕಾರ್ಪೋರೇಷನ್ ಬ್ಯಾಂಕ್ ಸಿದ್ಧಾರ್ಥ ಲೇಔಟ್, ಮೈಸೂರು ಶಾಖೆ, ಗೃಹಸಾಲ | ಎದುರುದಾರರ ಹೆಸರಿನಲ್ಲಿ | 25,00,000/– |
| 4 | ಎದುರುದಾರರ ಮಾವ ಶ್ರೀ.ವೆಂಕಟೇಶ್ ರವರಿಂದ ಪಡೆದ ಕೈಸಾಲ | ಎದುರುದಾರರ ಹೆಸರಿನಲ್ಲಿ | 2,00,000/– |
| 5 | ಎದುರುದಾರರ ತಂದೆ ಶ್ರೀ.ರಂಗಯ್ಯ ರವರಿಂದ ಪಡೆದ ಕೈಸಾಲ. | ಎದುರುದಾರರ ಹೆಸರಿನಲ್ಲಿ | 10,000/– |
| 6 | ಎದುರುದಾರರ ಪತ್ನಿ ಡಾ: ಶೋಭಾ ಗೋಪಾಲ್ ರವರಿಂದ ಪಡೆದ ಕೈಸಾಲ. | ಎದುರುದಾರರ ಹೆಸರಿನಲ್ಲಿ | 1,50,000/– |
| 7 | ಎದುರುದಾರರ ಸಹೋದರ ಶ್ರೀ. ಆರ್.ಸುನೀಲ್‌ರವರಿಂದ ಪಡೆದ ಕೈಸಾಲ. | ಎದುರುದಾರರ ಹೆಸರಿನಲ್ಲಿ | 4,06,000/– |

ಎದುರುದಾರರು ಮೇಲ್ಕಂಡ ಸಾಲಗಳನ್ನು ಬ್ಯಾಂಕ್‌ಗಳಲ್ಲಿ ಮತ್ತು ಕೈಸಾಲ ಪಡೆಯುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದವರಿಂದ ಅನುಮತಿ ಪಡೆಯದೆ ಹಾಗೂ ಮಾಹಿತಿ ಸಲ್ಲಿಸದೆ ನಿಯಮ 21(4) ಕ.ನಾ.ಸೇ. (ನಡತೆ) ನಿಯಮಗಳು, 1966 (ಪ್ರಸ್ತುತ ನಿಯಮ 22(4) ಕ.ನಾ.ಸೇ. (ನಡತೆ) ನಿಯಮಗಳು, 2021)ನ್ನು ಉಲ್ಲಂಘಿಸಿ, ಕ.ನಾ.ಸೇ. (ನಡತೆ) ನಿಯಮಗಳು, 1966ರ ನಿಯಮ 3 (1)(i) ರಿಂದ (iii) (ಪ್ರಸ್ತುತ

ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

iii) ಎದುರುದಾರರು ಅವರ ಸೇವಾ ಅವಧಿಯಲ್ಲಿ ಆಸ್ತಿ ಮತ್ತು ದಾಯಿತ್ವದ ಪಟ್ಟಿಗಳನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿದ್ದು, ಅವರು ಅವರ ಸೇವಾ ಅವಧಿಯಲ್ಲಿ ಆಸ್ತಿ ಮತ್ತು ದಾಯಿತ್ವದ ಪಟ್ಟಿಯ ನೈಜ ಮಾಹಿತಿಯನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಸಾಕಷ್ಟು ಕಾಲಾವಕಾಶ ನೀಡಿದರೂ ಎದುರುದಾರರು ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ. ಆ ಕಾರಣ, ಎದುರುದಾರರ ಆಕ್ಷೇಪಣೆಗಳು ಇಲ್ಲವೆಂದು ಪರಿಗಣಿಸಲಾಗಿದೆ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಎದುರುದಾರರು ಕ.ನಾ.ಸೇ.(ನಡತೆ) ನಿಯಮಗಳು, 1966ರ ನಿಯಮಗಳು 21(4), 23(2), 23(3) ಮತ್ತು 23(3-ಎ) (ಪ್ರಸ್ತುತ ನಿಯಮ 22(4), 24(3), 24(4) ಮತ್ತು 24(5)ರನ್ವಯ ಕ.ನಾ.ಸೇ. (ನಡತೆ) ನಿಯಮಗಳು, 2021) ನಿಯಮಗಳನ್ನು ಪಾಲಿಸದೆ, ಉಲ್ಲಂಘಿಸಿ, ಕ.ನಾ.ಸೇ. (ನಡತೆ) ನಿಯಮಗಳು 1966ರ ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ 3(i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

6. ಎದುರುದಾರರಾದ ಶ್ರೀ. ಆರ್. ಗೋಪಾಲ್, ನಿರ್ದೇಶಕರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ವಸ್ತು ಪ್ರದರ್ಶನ ಮೈದಾನ,

ಮೈಸೂರು (ನಿವೃತ್ತಿ ದಿ: 31/05/2023)ರವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು / ಇಲಾಖಾ ವಿಚಾರಣೆಯನ್ನು ಮಾಡಲು ಕರ್ನಾಟಕ ಲೋಕಾಯುಕ್ತ ಕಾಯಿದೆ 12(3) ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

11/1/23

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.